# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಕಾರ್ಯದರ್ಶಿ, ವಾರ್ಡ್ ಸಮಿತಿ/ಸಹಾಯಕ ಅಭಿಯಂತರರ ಕಛೇರಿ, ದಯಾನಂದನಗರ ವಾರ್ಡ್-97**

**1ನೇ ಮುಖ್ಯ ರಸ್ತೆ. ಶ್ರೀರಾಂಪುರ ಪೋಲಿಸ್ ಠಾಣೆ ಹಿಂಭಾಗ, ದಯಾನಂದನಗರ**

---

***ಸಂ: ವಾ-97/ವಾ.ಸ/ಸಭಾನಡವಳಿ-07/20-21*** ***ದಿ:08.01.21***

## ಸಭೆಯ ನಡವಳಿಗಳು

ದಿನಾಂಕ: 08.01.21 ಶುಕ್ರವಾರ ಪೂರ್ವಾಹ್ನ 11.00 ಘಂಟೆಗೆ ವಾರ್ಡ್-97 ದಯಾನಂದನಗರದ ವಾರ್ಡ್ ಮಟ್ಟದ ಸಮಿತಿ ಸಭೆಯನ್ನು ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು.

ಶ್ರೀಮತಿ ಅಮೃತ ಸಾಯಿ ಸಮಿತಿಯ ಕಾರ್ಯದರ್ಶಿಗಳು ಹಾಗೂ ಸಂಚಾಲಕರು ವಾರ್ಡ್-97 ರವರು ಸಭೆಗೆ ಆಗಮಿಸಿರುವ ಎಲ್ಲರಿಗೂ ಸ್ವಾಗತ ಕೋರಿದರು. ನಂತರ ಸಾರ್ವಜನಿಕರ ಕುಂದು ಕೊರತೆಗಳು ಹಾಗೂ ವಾರ್ಡ್ ಅಭಿವೃದ್ಧಿಗೆ ಸಂಬಂದಿಸಿದಂತೆ ಹಾಗೂ ಕೋವಿಡ್-19 ವೈರಸ್‌ನ ಸೋಂಕಿನ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು, ಮೂಲಭೂತ ಸೌಕರ್ಯಗಳನ್ನು ಒದಗಿಸಲು ಹಾಗೂ ಸಾರ್ವಜನಿಕರ ಹಿತರಕ್ಷಣೆಗಾಗಿ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಬಗ್ಗೆ ಚರ್ಚಿಸಲು ಸಭೆಗೆ ಆಗಮಿಸಿರುವ ಎಲ್ಲಾ ಅದೀಕಾರಿಗಳಿಗೆ ಸಹಾಯಕ ಅಭಿಯಂತರರು ಸಭೆಗೆ ಸ್ವಾಗತ ಕೋರುತ್ತಾ,ಸಭೆಯನ್ನು ಮುನ್ನಡೆಸಲಾಯಿತು.

**ಸಭೆಗೆ ಹಾಜರಿದ್ದವರು:**

1. ಶ್ರೀಮತಿ.ಅಮೃತ ಸಾಯಿ, ನೋಡಲ್ ಅಧಿಕಾರಿಗಳು ಹಾಗೂ ವಾರ್ಡ ಸಮಿತಿ ಅಧ್ಯಕ್ಷರು.
2. ಶ್ರೀಮತಿ.ಅಮೃತ ಸಾಯಿ, ಕಾರ್ಯದರ್ಶಿ ಹಾಗೂ ಸಂಚಾಲಕರು.
3. ಶ್ರೀಮತಿ.ಜೆ.ಶಕುಂತಲ,ಸ.ಅ,ಬೆಸ್ಕಾಂ
4. ಶ್ರೀಮತಿ.ಭಾರತಿ.ಕೆ.ಆರ್,ಸ.ಅ,ಬೆಸ್ಕಾಂ
5. ಶ್ರೀ.ಕಿರಣ್ ಕುಮಾರ್, ವಾಟರ್ ಇನ್ಸಸ್ಪೆಕ್ಟರ್,ಬಿ.ಡಬ್ಲ್ಯೂ.ಎಸ್.ಎಸ್.ಬಿ
6. ಶ್ರೀ.ಕುಮಾರ್.ಡಿ, ಡಾ//ಬಿ.ಆರ್.ಅಂಬೇಡ್ಕರ್ ಸೇವಾ ಸಂಘ
7. ಶ್ರೀ.ಆರ್.ಕುಮಾರೇಶ್, ಆರ್.ಕೆ.ಎಸ್ ನಗರ ಆರ್.ಡಬ್ಲ್ಯೂ.ಓ
8. ಶ್ರೀ.ರಮೇಶ್.ವೈ.ವಿ, ವಾರ್ಡ್ ಮಾರ್ಶಲ್
9. ಶ್ರೀ.ಆರ್.ಪ್ರಭಾಕರ್. ಡಾ//ಬಿ.ಆರ್.ಅಂಬೇಡ್ಕರ್ ಸೇವಾ ಸಂಘ
10. ಶ್ರೀ.ಬಾಬು ಪ್ರಸಾದ್ ,ವಾರ್ಡ ಅದ್ಯಕ್ಷರು
11. ಶ್ರೀ.ಕಿರಣ್ ಕುಮಾರ್.ಹೆಚ್.ಸಿ,ಕಂದಾಯ ಪರೀವೀಕ್ಷಕರು.
12. ಶ್ರೀ.ಎಂ.ಹೆಚ್.ಹೆಗಡೆ, ಪೋಲೀಸ್ ಕಾನ್ಸ್ಟೇಬಲ್(ಟ್ರಾಫಿಕ್ ಪೋಲೀಸ್ ಠಾಣೆ-ಮಲ್ಲೇಶ್ವರಂ)
13. ಶ್ರೀ.ಮಂಜುನಾಥ್.ಬಿ, ಕಂದಾಯ ಪರೀವೀಕ್ಷಕರು.
14. ಶ್ರೀ.ಎನ್.ವೆಂಕಟೇಶ್. ಕಿರಿಯ ಆರೋಗ್ಯ ಪರಿವೀಕ್ಷಕರು(ಘನತ್ಯಾಜ್ಯ ನಿರ್ವಹಣೆ-ಬಿಬಿಎಂಪಿ)
15. ಶ್ರೀ.ನಾಗರಾಜ್.ಎಸ್ ತೋಟಗಾರಿಕೆ ಇಲಾಖೆ

Scanned with CamScanner

## ಸಭೆಯಲ್ಲಿ ಚರ್ಚಿಸಲಾದ ವಿಷಯಗಳು

ಮೇಲೆ ಹಾಜರಿದ್ದ ಅಧಿಕಾರಿಗಳು ಹಾಗೂ ಸಮಿತಿ ಸದಸ್ಯರು ಸಮುಖದಲ್ಲಿ ವಾರ್ಡ್ ಸಂ:97 ರ ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ ಸಭೆ ಸೇರಿರುವ ಉದ್ದೇಶ ಮತ್ತು ಸಭೆಯ ಮಹತ್ವವನ್ನು ಸದಸ್ಯರ ಮುಖ ಪರಿಚಯದೊಂದಿಗೆ ವಿವರಿಸುತ್ತಾ ಹಾಜರಿದ್ದ ಸದಸ್ಯರಿಗೆ ಹಾಗೂ ಅಧಿಕಾರಿಗಳಿಗೆ ಸ್ವಾಗತ ಕೋರುತ್ತಾ ವಾರ್ಡ್ ವ್ಯಾಪ್ತಿಯ ಜಲಮಂಡಳಿ, ಬೆಸ್ಕಂ ಘನತ್ಯಾಜ್ಯ ವಿಲೇವಾರಿ, ಆರೋಗ್ಯ ಇಲಾಖೆ, ಕಂದಾಯ, ಕಾಮಗಾರಿ ಇಲಾಖೆಗಳಿಗೆ ಸಂಬಂದಿಸಿದಂತೆ ಪ್ರಸ್ತುತ ಇರುವ ಸಮಸ್ಯೆಗಳು ಹಾಗೂ ಪರಿಹಾರೋಪಾಯಗಳು ತೆಗೆದುಕೊಳ್ಳಬಹುದಾದ ಕ್ರಮಗಳ ಬಗ್ಗೆ ಚರ್ಚಿಸಲಾಯಿತು.

1. ವಾರ್ಡ್ 97 ರಲ್ಲಿ ಬರುವ ಎಲ್ಲಾ ಬಿಬಿಎಂಪಿ ಕಛೇರಿಗಳ ಬೆಸ್ಕಾಂ ಬಿಲ್‌ಗಳನ್ನು ಪಾವತಿಸಲು ಅಧಿಕಾರಿಗಳು ತಿಳಸಿದರು.
2. ಆರ್.ಕೆ.ಎಸ್ ನಗರದಲ್ಲಿ ವಾಟರ್ ಮೀಟರ್ ಅಳವಡಿಸಿರುವುದಿಲ್ಲವೆಂದು ದೂರು ನೀಡಲಾಯಿತು.
3. 5.6.7ನೇ ಮುಖ್ಯ ರಸ್ತೆ ದಯಾನಂದನಗರ ರಸ್ತೆಗಳಿಗೆ ಡಾಂಬರೀಕರಣ ಮಾಡಿಸಲು ಸಾರ್ವಜನಿರು ಕೋರಿದ್ದು, ಸದರಿ ಕಾಮಗಾರಿ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆಂದು ಅಧಿಕಾರಿಗಳು ತಿಳಿಸಿದರು.
4. 5ನೇ ಹಾಗೂ 7ನೇ ಮುಖ್ಯ ರಸ್ತೆ ಬದಿಯಲ್ಲಿ ನಿಲ್ಲಿಸಿರುವ ವಾಹನಗಳನ್ನು ತೆರವುಗೋಳಿಸಲು ಸೂಚಿಸಿದ್ದು, ಟ್ರಾಫಿಕ್ ಪೋಲೀಸ್ ರವರು ನೊಂದಣಿ ಸಂಖ್ಯೆ ಇರುವ ಗಾಡಿಗಳನ್ನು ನೋಟೀಸ್ ನೀಡಿ ತೆಗೆಸಿದ್ದು, ನಂಬರ್ ಇರದ ಗಾಡಿಗಳನ್ನು ಸ್ಥಳ ದೊರೆತ ನಂತರ ತೆರವುಗೊಳಿಸಲಾಗುವುದು ಎಂದು ತಿಳಿಸಿದರು.
5. ಅಂಬೇಡ್ಕರ್ ನಗರ ಮಟನ್ ಮಾರ್ಕೆಟ್ ಇದ್ದ ಜಾಗದಲ್ಲಿರುವ ಡೆಬ್ರಿಸ್ ತೆಗೆಸಲು ದೂರು ನೀಡಲಾಗಿತು.

ಈ ಎಲ್ಲಾ ವಿಷಯದ ಬಗ್ಗೆ ಚರ್ಚಿಸಲಾಗಿ ಸೂಕ್ತ ಕ್ರಮ ಕೈಗೋಳ್ಳಲು ಸೂಚಿಸಿ ಸಮಿತಿಯ ಅಧ್ಯಕ್ಷರು ಹಾಗೂ ನೋಡಲ್ ಅಧಿಕರಿಗಳು ಎಲ್ಲರಿಗೂ ವಂದನೆಗಳನ್ನು ಕೋರುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

Amitabh

ನೋಡಲ್ ಅಧಿಕಾರಿಗಳು
ವಾರ್ಡ್ ಸಂ–97

ಪ್ರತಿಯನ್ನು:

1. ಮಾನ್ಯ ಆಯುಕ್ತರ ಆಪ್ತ ಸಹಾಯಕರಿಗೆ ಕಳುಹಿಸುತ್ತಾ ಮಾನ್ಯ ಆಯುಕ್ತರ ಗಮನಕ್ಕೆ ತರುವಂತೆ ಕೋರಿದೆ.
2. ವಿಶೇಷ ಆಯುಕ್ತರು ಆಡಳಿತ ರವರ ಅವಾಗಹನೆಗೆ ಸಲ್ಲಿಸಿದೆ.
3. ವಲಯ ಆಯುಕ್ತರು (ಪಶ್ಚಿಮ) ರವರ ಅವಾಗಹನೆಗೆ ಸಲ್ಲಿಸಿದೆ.
4. ಜಂಟಿ ಆಯುಕ್ತರು (ಪಶ್ಚಿಮ) ರವರ ಅವಾಗಹನೆಗೆ ಸಲ್ಲಿಸಿದೆ.
5. ನೋಡಲ್ ಅಧಿಕಾರಿಗಳು ಹಾಗೂ ವಾರ್ಡ ಸಮಿತಿ ಅಧ್ಯಕ್ಷರು ರವರ ಅವಾಗಹನೆಗೆ ಸಲ್ಲಿಸಿದೆ.
6. ಕಛೇರಿ ಕಡತಕ್ಕೆ

Scanned with CamScanner